ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು)

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಮವಾಗಿ 75,555 ಮತ್ತು 23,177 ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆಗಳನ್ನು 1999-2000 ರಿಂದ 2001-2002ರವರೆಗೆ ನಡೆಸಲಾಗಿದೆ. ವಿವರ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಜಿಲ್ಲೆ	1999-2000	2000-2001	2001-2002	ಒಟ್ಟು
1	ಮೈಸೂರು	24,635	25,629	25,291	75,555
2	ಚಾಮರಾಜನಗರ	7,980	7,990	7,207	23,177

ಆ) ಶಸ್ತ್ರ ಚಿಕಿತ್ಸೆ ಸಮಯದಲ್ಲಿ ಬೇಜವಾಬ್ದಾರಿಯಿಂದ ಮರಣ ಹೊಂದಿದ ಪ್ರಕರಣಗಳು ಇದುವರೆವಿಗೂ ವರದಿಯಾಗಿರುವುದಿಲ್ಲ. ಆದರೆ ಕಳೆದ ಮೂರು ವರ್ಷಗಳಲ್ಲಿ, ಬೇರೆ ಕಾರಣಗಳಿಗೆ ಮೈಸೂರಿನಲ್ಲಿ ಇಬ್ಬರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಒಬ್ಬರು ಮರಣ ಹೊಂದಿರುತ್ತಾರೆ.

ಕ್ರಮ ಸಂಖ್ಯೆ	ಜಿಲ್ಲೆ	ಹೆಸರು	ಮರಣ ಹೊಂದಿದ ದಿನಾಂಕ
1	ಮೈಸೂರು	1. ಶ್ರೀಮತಿ ಮಂಗಳಮ್ಮ ಕೋಂ ಜವರೇಗೌಡ	26-6-2000
		2. ಶ್ರೀಮತಿ ವಸಂತ ಕೋಂ ಕುಮಾರ	26-11-2001
2	ಚಾಮರಾಜನಗರ	1. ಶ್ರೀಮತಿ ಪುಷ್ಪವತಿ ಕೋಂ ವೃಷಬೇಂದ	11-10-2001

ಇ) ಉದ್ಭವಿಸುವುದಿಲ್ಲ.

ಈ) ಹೌದು, ಪ್ರತಿ ಕುಟುಂಬಕ್ಕೆ ರೂ. 50,000/- ರಂತೆ ಎರಡು ಪ್ರಕರಣಗಳಿಗೆ ರೂ. 1,00,000/- ಪರಿಹಾರ ನೀಡಲಾಗಿದೆ, ಒಂದು ಪ್ರಕರಣದಲ್ಲಿ ಪೂರ್ಣ ದಾಖಲಾತಿಗಳು ಸ್ವೀಕೃತವಾಗಿಲ್ಲ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಮತಿ ರಹಿತ ಶಾಲೆಗಳು

1725 (2056) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಮತಿ ಪಡೆಯದ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಯಾವುವು;

ಆ) ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗದಂತೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಡೊನೇಷನ್ ಪಿಡುಗನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು?

ಈ) ಮೈಸೂರು ಜಿಲ್ಲೆಯಲ್ಲಿ ಖಾಸಗಿ ಕ್ಷೇತ್ರದಲ್ಲಿ ಡೊನೇಷನ್ ಪಡೆಯದೆ ಕೆಲಸ ಮಾಡುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಯಾವುವು?

ಉ) ಅನುದಾನಿತ ಮತ್ತು ಅನುದಾನ ರಹಿತ ಸಂಸ್ಥೆಗಳಲ್ಲಿ ಇರುವ ತಾರತಮ್ಯವನ್ನು ಹೋಗಲಾಡಿಸಿ ಶಿಕ್ಷಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರದಂತೆ ಕೈ ಗೊಂಡಿರುವ ಕ್ರಮಗಳೇನು?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 1) ಮೈಸೂರು ಜಿಲ್ಲೆಯಲ್ಲಿ ಅನುಮತಿ ಪಡೆಯದ ಕನ್ನಡ ಪ್ರಾಥಮಿಕ ಶಾಲೆಗಳು-6 (ಶಾಲೆಗಳ ವಿವರಣೆ ಅನುಬಂಧದಲ್ಲಿ ನೀಡಿದೆ) ಇಂಗ್ಲೀಷ್ ಮಾಧ್ಯಮ ಪ್ರಾಥಮಿಕ ಶಾಲೆಗಳು ಇರುವುದಿಲ್ಲ. ಕನ್ನಡ ಪ್ರೌಢ ಶಾಲೆಗಳು-2 (ಶಾಲೆಗಳ ವಿವರಣೆ ಅನುಬಂಧದಲ್ಲಿ ನೀಡಿದೆ) ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆಗಳು ಇರುವುದಿಲ್ಲ.

2) ಚಾಮರಾಜನಗರ ಜಿಲ್ಲೆಯಲ್ಲಿ ಅನುಮತಿ ಪಡೆಯದ ಕನ್ನಡ ಪ್ರಾಥಮಿಕ ಶಾಲೆ-1 ಶ್ರೀನಿಧಿ ಕಿರಿಯ ಪ್ರಾಥಮಿಕ ಶಾಲೆ, ಸೋಮವಾರಪೇಟೆ, ಚಾಮರಾಜನಗರ ತಾ।। ಪ್ರೌಢ ಶಾಲೆಗಳು ಯಾವುದೂ ಇರುವುದಿಲ್ಲ.

ಆ) ಇಂತಹ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಬಾರದಾಗಿ ಈಗಾಗಲೇ ಸದರಿ ಆಡಳಿತ ಮಂಡಳಿಯವರಿಗೆ ನಿರ್ದೇಶನ ನೀಡಲು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ ಹಾಗೂ ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಇ) ಖಾಸಗಿ ವಿದ್ಯಾ ಸಂಸ್ಥೆಗಳ ಮುಖ್ಯಸ್ಥರು ಕಾರ್ಯದರ್ಶಿಗಳ ಸಭೆಯನ್ನು ಕರೆದು ಡೊನೇಷನ್ ಪಿಡುಗನ್ನು ತಪ್ಪಿಸುವ ಬಗ್ಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಚರ್ಚಿಸಿ ನಿರ್ದೇಶನ ನೀಡಲಾಗಿದೆ. ಇದರಂತೆ ನಿಯಮ ಉಲ್ಲಂಘನೆಗೆ ಅವಕಾಶ ನೀಡದಂತೆ ಪ್ರವೇಶ ದಾಖಲಾತಿ ಮಾಡಿಕೊಳ್ಳಲು ತಿಳಿಸಿದೆ. ಈ ಬಗ್ಗೆ ವಿಷಯ ಪರಿವೀಕ್ಷಕರನ್ನೊಳಗೊಂಡ ತನಿಖಾ ತಂಡ ರಚಿಸಿದೆ. ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಲು ನಿರ್ದೇಶನ ನೀಡಿದೆ ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಭೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಈ) ಈ ಜಿಲ್ಲೆಯಲ್ಲಿನ ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಡೊನೇಷನ್ ಪಡೆಯುತ್ತಿರುವ ಬಗ್ಗೆ ಈವರೆವಿಗೂ ಯಾವುದೇ ಲಿಖಿತವಾಗಿ ದೂರು ಬಂದಿರುವುದಿಲ್ಲ.

ಉ) ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿನ ಪಠ್ಯ ಕ್ರಮ ಬೋಧನಾ ಕ್ರಮ ಅಳವಡಿಸಿಕೊಳ್ಳಲಾಗಿದೆ. ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ಬೇಕಾಗಿರುವ ಸಂಪನ್ಮೂಲ ಬೆಂಬಲ ಮತ್ತು ಸೇವಾ ನಿರತ ತರಬೇತಿಯನ್ನು ನೀಡುವಂತೆ, ಈ ಶಾಲಾ ಶಿಕ್ಷಕರಿಗೂ ಆಗಿಂದಾಗ್ಗೆ ಸಿಇಟಿ ಮತ್ತು ಡಯಟ್ ಸಂಸ್ಥೆಯ ಮೂಲಕ ನೀಡಲಾಗುತ್ತಿದೆ. ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಮತ್ತು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ಸಂಘದ ಮೂಲಕ ಏಕರೂಪದ ಪಠ್ಯ ಯೋಜನೆ ರೂಪಿಸಿ, ಎಲ್ಲಾ ಶಾಲೆಗಳಿಗೆ ಯೋಜನಾ ಬದ್ಧವಾದ ಪಠ್ಯ ಬೋಧನೆಗೆ ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ

ಮೈಸೂರು ಜಿಲ್ಲೆಯಲ್ಲಿ ಅನುಮತಿ ಪಡೆಯದೇ ಇರುವ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳು ಹಾಗೂ ಪ್ರೌಢ ಶಾಲೆಗಳು

ಪ್ರಾಥಮಿಕ ಶಾಲೆಗಳು

1) ಗೋಖಲೆ ಪ್ರಾಥಮಿಕ ಶಾಲೆ ಕಲ್ಯಾಣ ಗಿರಿನಗರ ಮೈಸೂರು
2) ಸಾರೋಮ ಕಾನ್ವೆಂಟ್, ರಾಮಕೃಷ್ಣನಗರ, ಮೈಸೂರು

3) ಬಿ.ಎಲ್.ಎನ್. ವಿದ್ಯಾ ಮಂದಿರ, ಬನ್ನಿಮಂಟಪ ಮೈಸೂರು
4) ವಿವೇಕಾನಂದ ಪ್ರಾಥಮಿಕ ಶಾಲೆ, ರಂಗ ಸಮುದ್ರ, ಟಿ. ನರಸೀಪುರ ತಾ
5) ಜಿ.ಪಿ.ಪಿ. ಪ್ರಾಥಮಿಕ ಶಾಲೆ, ಅತ್ತಹಳ್ಳಿ, ಟಿ. ನರಸೀಪುರ ತಾ
6) ಖಾಸಗಿ ಪ್ರಾಥಮಿಕ ಶಾಲೆ, ಹ್ಯಾಕನೂರು, ಸೀಹಳ್ಳಿ, ಟಿ. ನರಸೀಪುರ ತಾ

ಪ್ರೌಢ ಶಾಲೆಗಳು

1) ಶಾರದಾ ಶಿಕ್ಷಣ ಸಂಸ್ಥೆ, ಹನುಮನಾಳು, ಟಿ. ನರಸೀಪುರ ತಾ
2) ಪಿ.ಆರ್.ಎಂ. ವಿದ್ಯಾ ಸಂಸ್ಥೆ, ಟಿ. ನರಸೀಪುರ ತಾ

ವಿದ್ಯಾಪೀಠಗಳ ಕಾರ್ಯ ನಿರ್ವಹಣೆ

1726 (2057) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದಿನ ವಯಸ್ಕರ ಶಿಕ್ಷಣ ಸಮಿತಿಯ ಅಡಿಯಲ್ಲಿ ಇದ್ದ ವಿದ್ಯಾಪೀಠಗಳು ಎಷ್ಟು; ಅವು ಯಾವುವು;

ಆ) ವಯಸ್ಕರ ಶಿಕ್ಷಣ ಸಮಿತಿ ರದ್ದಾದ ನಂತರ ವಿದ್ಯಾಪೀಠಗಳನ್ನು ಯಾವ ಇಲಾಖೆಯ ನಿರ್ವಹಣೆಗೆ ವಹಿಸಲಾಗಿದೆ;

ಇ) ವಿದ್ಯಾಪೀಠಗಳಿಂದ ಬರುತ್ತಿರುವ ಆದಾಯ ಎಷ್ಟು; ವಿದ್ಯಾಪೀಠಗಳನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ;

ಈ) ವಿದ್ಯಾಪೀಠಗಳನ್ನು ಉದ್ದೇಶಿತ ಮೂಲ ಗುರಿಗೆ ಬಳಸಲಾಗುತ್ತಿದೆಯೇ;

ಉ) ವಿದ್ಯಾಪೀಠಗಳ ಆಸ್ತಿ ಮತ್ತು ಜಮೀನನ್ನು ಅಕ್ರಮವಾಗಿ ಸ್ವಾಧೀನಪಡಿಸಿರುವ ಪ್ರಕರಣಗಳು ಇವೆಯೇ; ಹೌದಾದರೆ, ಅದರ ತೆರವಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಈ ಹಿಂದಿನ ವಯಸ್ಕರ ಶಿಕ್ಷಣ ಸಮಿತಿಯ ಅಡಿಯಲ್ಲಿ ಇದ್ದ ವಿದ್ಯಾಪೀಠಗಳು 16. ಅವು ಯಾವುವೆಂದರೆ,

1) ನಂಜನಗೂಡು
2) ಯಗಚಿ
3) ತುಂಗಾ
4) ಕೆಂಗೇರಿ
5) ಶಿವಾರಗುಡ್ಡ
6) ಏನಿಗದೆರೆ
7) ಪಂಪಾ
8) ಬಂಢನಾಳ
6) ಕಾತ್ರಾಳ
10) ನವಿಲಗಿರಿ
11) ವರದಾ
12) ಬಸವಕಲ್ಯಾಣ
13) ಚಾರಾ
14) ಕಾವೇರಿ
15) ಹೊಯ್ಸಳ
16) ಶಿವಗಂಗಾ

ಆ) ವಯಸ್ಕರ ಶಿಕ್ಷಣ ಸಮಿತಿ ರದ್ದಾದ ನಂತರ ವಿದ್ಯಾಪೀಠಗಳನ್ನು ಲೋಕ ಶಿಕ್ಷಣ ನಿರ್ದೇಶನಾಲಯದ ನಿರ್ವಹಣೆಗೆ ವಹಿಸಲಾಗಿದೆ.